# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಬಿಜಿಎಂ-3133/2015/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 19/01/2018

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

**ವಿಷಯ:** ಶ್ರೀ ಸುಧೀರ ಯಶವಂತ ನೇಸರಕರ್, ರೈತ ಗಲ್ಲಿ, ಪೀರನವಾಡಿ, ಬೆಳಗಾವಿ ಜಿಲ್ಲೆ ಇವರು ಈ ಸಂಸ್ಥೆಗೆ ಸಲ್ಲಿಸಿದ ದೂರಿನನ್ವಯ ಕಾನೂನು ರೀತ್ಯ ಕ್ರಮ ಜರುಗಿಸಿ ವರದಿ ಸಲ್ಲಿಸುವ ಬಗ್ಗೆ.

*-*-*

1. ಪ್ರಕರಣದ ದೂರುದಾರರಾದ ಶ್ರೀ ಸುಧೀರ ಯಶವಂತ ನೇಸರಕರ್ ರವರು ಈ ಸಂಸ್ಥೆಗೆ ದೂರನ್ನು ಸಲ್ಲಿಸಿ, ದಿ:26-11-2014 ರಂದು ಲಿಖಿತವಾಗಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಉತ್ತರ ಉಪ-ವಿಭಾಗ-1 ಮಹಾನಗರ ಪಾಲಿಕೆ, ತಿಲಕವಾಡಿ, ಬೆಳಗಾವಿ ಇವರಿಗೆ ಅರ್ಜಿಯನ್ನು ಸಲ್ಲಿಸಿ ಬೆಳಗಾವಿಯ ರಾಜಾರಾಮನಗರದ ನಿವೇಶನ ಸಂ.46 ರಲ್ಲಿ ಚನ್ನಪ್ಪ ತಳವಾರ ರವರು ಕಟ್ಟಡ ಕಟ್ಟಲು ಮಹಾನಗರ ಪಾಲಿಕೆಯಿಂದ ಪರವಾನಿಗೆಯನ್ನು ಪಡೆಯದೇ ವಲಯ ನಿಯಮಾವಳಿಗಳನ್ನು ಉಲ್ಲಂಘಿಸಿ ಕಟ್ಟಡ ನಿರ್ಮಿಸಿರುತ್ತಾರೆ ಅಂತಹ ಕಟ್ಟಡವನ್ನು ತೆರವುಗೊಳಿಸಲು ವಿನಂತಿಸಿದರೂ ಎದರುದಾರರು ಯಾವುದೇ ಕ್ರಮ ಜರುಗಿಸಿರುವುದಿಲ್ಲ. ಈ ಬಗ್ಗೆ ಮೌಖಿಕವಾಗಿ ಹಲವಾರು ಬಾರಿ ವಿನಂತಿಸಲಾಗಿರುತ್ತದೆ, ಆದರೆ ಯಾವುದೇ ಪ್ರಯೋಜನವಾಗಿರುವುದಿಲ್ಲ. ಆದ್ದರಿಂದ ಎದರುದಾರರ ವಿರುದ್ದ ಕ್ರಮ ಜರುಗಿಸಬೇಕೆಂಧು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ದೂರಿನ ಆಧಾರದ ಮೇಲೆ ಎದುರುದಾರರ ಆಕ್ಷೇಪಣೆಯನ್ನು ಕರೆಯಲಾಗಿದ್ದು, ಎದರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ. ಸದರಿ ಆಕ್ಷೇಪಣೆಯಲ್ಲಿ ದೂರುದಾರರು ತಮಗೆ ದಿ:26-11-2014 ರಂದು ನೀಡಿದ್ದ ಅರ್ಜಿಯಲ್ಲಿ ದೂರುದಾರರು ತಿಳಿಸಿದ್ದ ನಿವೇಶನ ಸಂ:46 ರಾಜಾರಾಮನಗರದ ಯಾವ ಲೇಔಟ್‌ನಲ್ಲಿ ಬರುತ್ತದೆ ಎಂಬುದರ ಬಗ್ಗೆ ನಿಖರವಾದ ಸ್ಥಳ ಗುರುತು ನೀಡಿರುವುದಿಲ್ಲ, ಆದರೂ ಸಹ ಸ್ಥಾನಿಕವಾಗಿ ವಿಚಾರಣೆ ಮಾಡಲಾಗಿ ಸದರಿ ನಿವೇಶನ ಎಸ್.ಸಿ. ತಳವಾರ ರವರಿಗೆ ಸೇರಿದ್ದು ಎನ್ನುವುದು ಕಂಡುಬರುತ್ತದೆ. ಅದರಂತೆ ಕಟ್ಟಡ ಪರವಾನಿಗೆ ಬಗ್ಗೆ ತಮ್ಮ ಕಚೇರಿಯ ಪತ್ರ ಸಂ. No.AEE/SOUTH-1/CB/2014-

15/185 dated 7-2-2014 and No.AEE/SOUTH-1/CB/2014-15/19 dated 4-6-2014 ಮೂಲಕ ಶ್ರೀಮತಿ ಎಸ್.ಸಿ. ತಳವಾರ, ರಾಜಾರಾಮನಗರ, ರಾಘವೇಂದ್ರ ಹೋಟೇಲ್ ಹಿಂಭಾಗ, ಉದ್ಯಮ್‌ಭಾಗ, ಬೆಳಗಾವಿ ಇವರಿಗೆ ಮಾಹಿತಿ ನೀಡಲು ತಿಳಿಸಿ ನೋಟಿಸ್ ನೀಡಲಾಗಿತ್ತು, ಆದರೆ ಸದರಿಯವರು ಕಟ್ಟಡ ಪರವಾನಿಗೆ ಪಡೆದಿರುವ ಬಗ್ಗೆ ಮಾಹಿತಿಯನ್ನು ತಮ್ಮ ಕಛೇರಿಗೆ ಸಲ್ಲಿಸಿರುವುದಿಲ್ಲ. ಹಾಗೂ ಸದರಿಯವರು ಕಟ್ಟಿರುವ ಕಟ್ಟಡವು ಸುಮಾರು 4 ರಿಂದ 5 ವರ್ಷಗಳ ಹಿಂದೆ ಕಟ್ಟಿದ್ದು ಇರುತ್ತದೆಂದು ಸ್ಥಳ ಪರಿಶೀಲನೆಯಿಂದ ಕಂಡುಬರುತ್ತದೆಂದು ತಿಳಿಸಿರುತ್ತಾರೆ. ಹಾಗೂ ದೂರುದಾರರಿಗೆ ಸದರಿ ನಿವೇಶನಕ್ಕೆ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸಲು ತಿಳಿಸಲಾಗಿತ್ತು, ಇದರಿಂದ ನಿಖರವಾಗಿ ಸದರಿ ನಿವೇಶವನ್ನು ಗುರುತಿಸಲು ಸಾಧ್ಯವಾಗುತ್ತದೆಂದು ತಿಳಿಸಿರುತ್ತಾರೆ.

3. ಎದರುದಾರರ ಆಕ್ಷೇಪಣೆಗಳ ಮೇಲೆ ದೂರುದಾರರಿಂದ ಪ್ರತ್ಯುತ್ತರನ್ನು ಕರೆಯಲಾಗಿದ್ದು, ಅದರಂತೆ ದೂರುದಾರರು ತಮ್ಮ ಪ್ರತ್ಯುತ್ತರವನ್ನು ಸಲ್ಲಿಸಿದ್ದು, ಅದರಲ್ಲಿ ದೂರುದಾರರು ಶ್ರೀ ಚನ್ನಪ್ಪ ತಳವಾರ ರವರು ಮನೆಯನ್ನು ಅನಧೀಕೃತವಾಗಿ ಕಟ್ಟಡವನ್ನು ಕಟ್ಟಿರುತ್ತಾರೆಂದು ತೋರಿಸಲು ಮಹಾನಗರ ಪಾಲಿಕೆಯಿಂದ ನೀಡಿರುವ ನೋಟಿಸ್‌ಗಳ ಪ್ರತಿಗಳನ್ನು ಹಾಜರುಪಡಿಸಿರುವುದಾಗಿ ತಿಳಿಸಿರುತ್ತಾರೆ ಹಾಗೂ ಚನ್ನಪ್ಪ ತಳವಾರ ಇವರು ಪ್ಲಾಟ್ ನಂ.46 ಕ್ಕೆ ಅಧಿಕೃತ ಮಾಲೀಕರಾಗಿರುವುದಿಲ್ಲ. ಆದ್ದರಿಂದಲೇ ಸದರಿಯವರು ಮಹಾನಗರ ಪಾಲಿಕೆಯಿಂದ ಕಟ್ಟಡ ಪರವಾನಿಗೆಯನ್ನು ಪಡೆದಿರುವುದಿಲ್ಲ. ಆದ್ದರಿಂದ, ಸದರಿ ಚನ್ನಪ್ಪ ತಳವಾರ ರವರ ಮೇಲೆ ಕ್ರಮವನ್ನು ಕೈಗೊಳ್ಳದೇ ಕರ್ತವ್ಯಲೋಪ ಎಸೆಗಿರುವ ಎದುರುದಾರರ ವಿರುದ್ಧ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ.

4. ದೂರಿನ ಅಂಶಗಳನ್ನು, ಎದರುದಾರರ ಆಕ್ಷೇಪಣೆಗಳನ್ನು ಹಾಗೂ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಾಗ, ಮಹಾನಗರ ಪಾಲಿಕೆ ವತಿಯಿಂದ ಎಸ್.ಸಿ. ತಳವಾರ ಇವರಿಗೆ ದಿ:7–2–14 ರಂದು 4–6–2014 ರಂದು ನೋಟಿಸ್ ನೀಡಿರುವುದು ಸ್ಪಷ್ಟಪಡುತ್ತದೆ. 1ನೇ ನೋಟಿಸ್‌ನಲ್ಲಿ "Hence it is treated that the construction of ground floor level carried out by you is unauthorized one" ಎಂದು ವಿಷಯ ಇರುವುದು ಕಂಡುಬರುತ್ತದೆ. ಸದರಿ 1ನೇ ನೋಟಿಸ್‌ನ್ನು ಹಾಜರುಪಡಿಸಲಾಗಿದೆ. 3ನೇ ನೋಟಿಸ್‌ನ ಪ್ರತಿಯನ್ನು ಹಾಜರುಪಡಿಸಿದ್ದು, ಅದರಲ್ಲಿಯೂ ಸಹ "it is treated that the construction of Ground floor level carried out by you is unauthorized one" ಎಂದು ವಿಷಯ ತಿಳಿಸಿರುವುದು ಕಂಡುಬರುತ್ತದೆ. ಈ ನೋಟಿಸ್‌ಗಳನ್ನು ಪರಿಶೀಲಿಸಿದಾಗ, ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ನಿವೇಶನ ನಂ.46 ಸ್ಥಳದಲ್ಲಿ ಸ್ಪಷ್ಟವಾಗಿ ಗೊತ್ತಿತ್ತು ಎಂದು ಹಾಗೂ ಎಸ್.ಸಿ.ತಳವಾರ ರವರು ಸದರಿ ನಿವೇಶನದಲ್ಲಿ ಕಟ್ಟಡವನ್ನು ಬೆಳಗಾವಿ ಮಹಾನಗರ

ಪಾಲಿಕೆಯಿಂದ ಪರವಾನಿಗೆ ಪಡೆಯದೇ ಕಟ್ಟುತ್ತಿದ್ದರೆಂಬುದು ಸಹ ತಿಳಿದುಬಂದಿತ್ತೆಂಬುದು ಕಂಡುಬರುತ್ತದೆ. ಆದ್ದರಿಂದ ಅಕ್ರಮವಾಗಿ ಕಟ್ಟುತ್ತಿದ್ದ ಕಟ್ಟಡ ಕಾಮಗಾರಿಯನ್ನು ತಡೆಹಿಡಿಯಬೇಕೆಂದು ನೋಟಿಸ್‌ನಲ್ಲಿ ತಿಳಿಸಿರುವುದು ಸ್ಪಷ್ಟಪಡುತ್ತದೆ. ದಿ:12–5–2016 ರ ಎದರುದಾರರ ಪತ್ರದಲ್ಲಿ ಎದರುದಾರರು ಅನಧಿಕೃತ ಕಟ್ಟಡವನ್ನು ತೆರವುಗೊಳಿಸಲು ಕ್ರಮ ಜರುಗಿಸುವ ಪೂರ್ವದಲ್ಲಿ ದಿ:20–5–2016 ರಂದು ಬೆಳಿಗ್ಗೆ 11 ಗಂಟೆಗೆ ನಿವೇಶನ ಸಂ.46 (ಹಳೆ ನಿವೇಶನ ನಂ. ಬಿ–40) ರಿ.ಸ.ನ.698, ರಾಜಾರಾಮನಗರ ಉದ್ಯಮ್‌ಭಾಗ, ಇಲ್ಲಿ ಸ್ಥಳ ಪರಿಶೀಲನೆ ಮಾಡಲು ನಿರ್ಧರಿಸಿದ್ದು, ದೂರುದಾರರ ಸಮಕ್ಷಮದಲ್ಲಿ ಸ್ಥಳ ಪರಿಶೀಲಿಸಿ ಕಟ್ಟಡದ ಅಳತೆ ತೆಗೆದುಕೊಳ್ಳುವ ಅವಶ್ಯಕತೆ ಇರುವುದರಿಂದ ಸದರಿ ಸ್ಥಳದಲ್ಲಿ ಹಾಜರು ಇರುವಂತೆ, ಕಟ್ಟಡದ ಮಾಲೀಕರಿಗೆ ಸೂಚಿಸಲಾಗಿತ್ತು. ನಿಗದಿತ ಸಮಯ ಹಾಗೂ ಸ್ಥಳದಲ್ಲಿ ಹಾಜರಾಗದೇ ಇದ್ದಲ್ಲಿ ಮಾಲೀಕರ ಅನುಪಸ್ಥಿತಿಯಲ್ಲಿ ಸ್ಥಳ ಪರಿಶೀಲನೆ ಮಾಡಿ ನಿಯಮಾನುಸಾರ ಮುಂದಿನ ಕ್ರಮ ಜರುಗಿಸಲಾಗುವುದೆಂದು ಶ್ರೀ ಚನ್ನಪ್ಪ ತಳವಾರ ಮತ್ತು ಶ್ರೀಮತಿ ಶಾಂತಾ ಚನ್ನಪ್ಪ ತಳವಾರ ಇವರಿಗೆ ತಿಳಿಸಿ, ನೋಟಿಸ್ ನೀಡಲಾಗಿತ್ತು. ಕಟ್ಟಡದ ಮಾಲೀಕರ ಸಮಕ್ಷಮ ಸ್ಥಳ ಪರಿಶೀಲನೆ ಮಾಡಿ ಸಮಗ್ರ ವಿವರವನ್ನು ಅನಧೀಕೃತ ಕಟ್ಟಡವನ್ನು ತೆರವುಗೊಳಿಸುವ ಪ್ರಸ್ತಾವನೆಯೊಂದಿಗೆ ಮಹಾನಗರ ಪಾಲಿಕೆ ಆಯುಕ್ತರು ರವರಿಗೆ ಸಲ್ಲಿಸಲಾಗುವುದು ಹಾಗೂ ಸ್ಥಳ ಪರಿಶೀಲನೆ ಮಾಡಿ ಪ್ರಸ್ತಾವನೆ ಮಂಡಿಸಿ ಮಹಾನಗರ ಪಾಲಿಕೆ ಆಯುಕ್ತರಿಂದ ಕೆ.ಎಂ.ಸಿ. ಅಧಿನಿಯಮ ಕಲಂ.321 ರ ಪ್ರಕಾರ ಅಂತಿಮ ಆದೇಶ ಕೈಗೊಳ್ಳಲಾಗುವುದೆಂದು ತಿಳಿಸಿರುತ್ತಾರೆ. ಈ ಪತ್ರಗಳಲ್ಲಿ ಒಳಗೊಂಡ ವಿಷಯಗಳಿಂದ ಎದರುದಾರರು ಸದರಿ ಚನ್ನಪ್ಪ ತಳವಾರ ಇವರಿಗೆ 2014 ನೇ ಇಸವಿಯಲ್ಲಿಯೇ ನೋಟಿಸ್‌ಗಳನ್ನು ನೀಡಿ ನಂತರ ಮುಂದಿನ ಕ್ರಮ ಜರುಗಿಸದೇ ಇರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

5. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ಬೆಳಗಾವಿಯ ರಾಜರಾಮನಗರದ ನಿವೇಶನ ನಂ. 46ರಲ್ಲಿ ಶ್ರೀ ಚನ್ನಪ್ಪ ತಳವಾರ ರವರು ಕಟ್ಟಿರುವ ಅನಧಿಕೃತ ಕಟ್ಟಡವನ್ನು ತೆರವುಗೊಳಿಸಲು ಮತ್ತು ತೆರವು ಗೊಳಿಸಿದ ನಂತರ ವರದಿ ಮಾಡಲು ಸರ್ಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.** ಈ ಬಗ್ಗೆ **ಎರಡು ತಿಂಗಳೊಳಗೆ** ಕ್ರಮ ಕೈಗೊಂಡು, ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ **ಒಂದು ತಿಂಗಳಯೊಳಗೆ** ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

**(ನ್ಯಾಯಮೂರ್ತಿ ಎನ್.ಆನಂದ)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ,**
**ಬೆಂಗಳೂರು.**